# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ, ಬೃ.ಬೆಂ.ಮ.ಪಾಲಿಕೆ ಜೆ.ಸಿ. ರಸ್ತೆ ಬೆಂಗಳೂರು

ಸಂಖ್ಯೆ:ಸ.ಇಂ/ವಾ-119/ವಾರ್ಡ್ ಸಭೆ/2020-21 ದಿನಾಂಕ:21/11/2020

### ವಾರ್ಡ್ -119ರ ವಾರ್ಡ್ ಸಭೆಯ ನಡವಳಿ

ದಿನಾಂಕ:21/11/2020 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್-119ರ ವಾರ್ಡ್ ಕಛೇರಿಯಲ್ಲಿ ಶ್ರೀ. ಡಿ.ಕೆ. ಮಧುಸೂದನ್, ಸ.ಕಾ.ನಿ.ಅ (ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ ರವರ ಕಛೇರಿ) ವಾರ್ಡ್119ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

**ಹಾಜರಿದ್ದ ಅಧಿಕಾರಿಗಳು :-**

1. ಶ್ರೀ. ಡಿ.ಕೆ. ಮಧುಸೂದನ್. ನೋಡಲ್ ಅಧಿಕಾರಿ ವಾರ್ಡ್-119
2. ಶ್ರೀ. ಎನ್. ಪ್ರದೀಪ್ ಕುಮಾರ್, ಸಂಚಾಲಕರು ಮತ್ತು ಕಾರ್ಯದರ್ಶಿ ವಾರ್ಡ್-119.
3. ಶ್ರೀ. ಸೀತಾರಾಮಯ್ಯ, ಹಿ.ಆ.ಪ ವಾರ್ಡ್-119.
4. ಶ್ರೀ. ಬಾಬುಕುಮಾರ್, ಕೆಲಸ ಪರಿವೀಕ್ಷಕರು ವಾರ್ಡ್-119.
5. ಶ್ರೀ. ವೀರಯ್ಯ, ಕಿ.ಆ.ಪ ವಾರ್ಡ್-119.
6. ಶ್ರೀ. ದೊರೈರಾಜು, ಕಂದಾಯ ಪರಿವೀಕ್ಷಕರು.
7. ಶ್ರೀ. ಶಂಕರ್, ಕಂದಾಯ ಪರಿವೀಕ್ಷಕರು.
8. ಶ್ರೀ. ಗೋಪಾಲಕೃಷ್ಣ, ಕಂದಾಯ ವಸೂಲಿಗಾರರು.
9. ಶ್ರೀಮತಿ. ಶಿಲ್ಪ, ಸಹಾಯಕ ಅಭಿಯಂತರರು, ಬೃಹತ್ ಮಳೆನೀರು ಚರಂಡಿ (ದಕ್ಷಿಣ).
10. ಶ್ರೀ. ಕೆ.ಎಸ್. ರಾಜೇಶ್, ಸಹಾಯಕ ಅಭಿಯಂತರರು, ಬೆಸ್ಕಾಂ.

**ಹಾಜರಿದ್ದ ಸ್ಥಳೀಯರು :-**

1. ಷಣ್ಮುಗಂ.
2. ಉಮೇಶ್.
3. ಸನ್ಮಾನ್.
4. ಪ್ರೊಫೆಸರ್ ಜನಾರ್ಧನ್, ಫೋರ್ಟ್ ಅಸೋಸಿಯೇಷನ್.
5. ಮುನಿಯಲ್ಲಪ್ಪ
6. ತೇಜುಕುಮಾರ್

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಸಭೆಗೆ ಎಲ್ಲರನ್ನು ಸ್ವಾಗತದೊಂದಿಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು. ಈ ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳನ್ನು ಅವಲೋಕಿಸುತ್ತಾ ಸದರಿ ವಿಷಯಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳನ್ನು ವಿಚಾರಿಸಲಾಗಿ ಕೈಗೊಂಡ ಕ್ರಮಗಳ ಬಗ್ಗೆ ಸಭೆಗೆ ತಿಳಿಸಲಾಯಿತು.

ಮು.ತಿ.ನೋ..

## ಚರ್ಚಿಸಲಾದ ವಿಷಯಗಳು:-

### 1. ಘನತ್ಯಾಜ್ಯ ವಿಭಾಗ:-

ಘನತ್ಯಾಜ್ಯ ವಿಷಯವಾಗಿ ಅಧ್ಯಕ್ಷರು ಮಾತನಾಡಿ, ಹಿಂದಿನ ಸಭೆಯಲ್ಲಿ ತಿಳಿಸಿದಂತೆ ಎಲ್ಲಾ ಪೌರಕಾರ್ಮಿಕರಿಗೆ ಅವಶ್ಯವಿರುವ ಸವಲತ್ತುಗಳನ್ನು ಒದಗಿಸಿರುವ ಬಗ್ಗೆ ವಾರ್ಡಿನ ಕಿರಿಯ ಆರೋಗ್ಯ ಪರಿವೀಕ್ಷಕರನ್ನು ವಿಚಾರಿಸಲಾಗಿ ಸದರಿಯವರು ಸದರಿ ಸವಲತ್ತುಗಳನ್ನು ಒದಗಿಸಿರುವುದಾಗಿ ತಿಳಿಸಿರುತ್ತಾರೆ.

ವಾರ್ಡ್ ವ್ಯಾಪ್ತಿಯ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸ ಬೀಳದಂತೆ ಎಚ್ಚರ ವಹಿಸಲು ಹಾಗೂ ಸದರಿ ಜಾಗದಲ್ಲಿ ಮಾರ್ಷಲ್‌ಗಳನ್ನು ನೇಮಿಸಿ ಕಸ ಬೀಳದಂತೆ ನೋಡಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಹಾಗೂ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸವನ್ನು ಬಿಸಾಡಿದವರಿಗೆ ದಂಡ ವಿಧಿಸಲು ಸೂಚಿಸಲಾಯಿತು. ಹಸಿ ಮತ್ತು ಒಣಕಸ ವಿಂಗಡಣೆ ಬಗ್ಗೆ ಹೆಚ್ಚಿನ ಆಧ್ಯತೆ ನೀಡಲು ತಿಳಿಸಲಾಯಿತು.

ಶ್ರೀ. ಸುಲೇಮಾನ್ ರವರು ಮಾತನಾಡಿ ಕಸ ಸರಿಯಾಗಿ ವಿಲೇವಾರಿಯಾಗದ ಕಾರಣ ಸಂಬಂಧಪಟ್ಟ ಗುತ್ತಿಗೆದಾರರಿಗೆ ದಂಡ ವಿಧಿಸುವಂತೆ ಕೋರಿರುತ್ತಾರೆ. ಹಾಗೂ ಅಗತ್ಯ ಜಾಗಗಳಲ್ಲಿ ಕಾರ್ಯ ನಿರ್ವಹಿಸುವ ಪೌರಕಾರ್ಮಿಕರಿಗೆ ಕೈಗಾಡಿಗಳು ಇಲ್ಲದಿರುವುದನ್ನು ಪರಿಶೀಲಿಸಿ ಅವರಿಗೆ ಕೈಗಾಡಿಗಳನ್ನು ವಿತರಿಸಲು ಹಾಗೂ ಎರಡನೇ ಪಾಳಿಯಲ್ಲಿ ರಸ್ತೆ ಗುಡಿಸಲು ಪೌರಕಾರ್ಮಿಕರನ್ನು ನೇಮಿಸಬೇಕಾಗಿ ಕೋರಿದರು. ಈ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ. ವೀರಯ್ಯ ರವರು ಮಾತನಾಡಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

### 2. ಕಾಮಗಾರಿ ಇಲಾಖೆ:-

ಕಾಮಗಾರಿ ವಿಷಯವಾಗಿ ಚರ್ಚಿಸಲಾಗಿ ವಾರ್ಡ್ ಕಛೇರಿಯ ಆವರಣದಲ್ಲಿ ಎಸ್.ಪಿ. ರಸ್ತೆಗೆ ಕೆಲಸಕ್ಕಾಗಿ ಬರುವ ಉದ್ಯೋಗಿಗಳು ಹಾಗೂ ಸಾರ್ವಜನಿಕರು ತಮ್ಮ ವಾಹನಗಳನ್ನು ನಿಲ್ಲಿಸಿ ಆವರಣದ ವಾತಾವರಣವನ್ನು ಹದಗೆಡಿಸಿರುವ ಬಗ್ಗೆ ಸಭೆಯಲ್ಲಿ ನೆರೆದಿದ್ದ ಎಲ್ಲರೂ ವಿಷಾದ ವ್ಯಕ್ತ ಪಡಿಸಿರುತ್ತಾರೆ. ಈ ಬಗ್ಗೆ ವಾರ್ಡ್ ಅಭಿಯಂತರರಾದ ಶ್ರೀ. ಪ್ರದೀಪ್‌ಕುಮಾರ್ ಎನ್. ರವರು ಮಾತನಾಡಿ ಈ ತಕ್ಷಣ ಈ ಬಗ್ಗೆ ಗಮನಹರಿಸಿ ಪಾಲಿಕೆ ಅಧಿಕಾರಿ/ನೌಕರರ ಹಾಗೂ ಪಾಲಿಕೆಯ ಕೆಲಸಕ್ಕಾಗಿ ಬರುವ ಸಾರ್ವಜನಿಕರ ಹೊರತು ಬೇರೆ ಯಾವುದೇ ವಾಹನಗಳನ್ನು ಆವರಣದೊಳಗಡೆ ಬಿಡದಂತೆ ಕಾವಲುಗಾರರನ್ನು ನೇಮಿಸಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಶ್ರೀ. ಮುನಿಯಲ್ಲಪ್ಪ ರವರು ಮಾತನಾಡಿ ವಾರ್ಡ್‌ನಲ್ಲಿ ಅನಧಿಕೃತ ಪೆಟ್ಟಿ ಅಂಗಡಿಗಳನ್ನು ಈ ಹಿಂದೆ ಪಾಲಿಕೆಯ ವತಿಯಿಂದ ತೆರವುಗೊಳಿಸಲಾಗಿತ್ತು. ಆದರೆ ಈಗ ಮತ್ತೆ ಅದೇ ಜಾಗಗಳಲ್ಲಿ ಪೆಟ್ಟಿ ಅಂಗಡಿಗಳನ್ನು ಇಡಲು ಶುರು ಮಾಡಿರುತ್ತಾರೆ ಎಂದು ದೂರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಸದರಿ ಅನಧಿಕೃತ ಪೆಟ್ಟಿ ಅಂಗಡಿಗಳನ್ನು ತೆರವುಗೊಳಿಸಲು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಶೀಘ್ರ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಮು.ತಿ.ನೋ..

3. **ಕೋವಿಡ್–19 ಸಾಂಕ್ರಾಮಿಕ ರೋಗದ ಬಗ್ಗೆ:–** ಧರ್ಮರಾಯಸ್ವಾಮಿ ವಾರ್ಡಿಗೆ ಸಂಬಂಧಪಟ್ಟಂತೆ, ಕೋವಿಡ್ ಸಾಂಕ್ರಾಮಿಕ ರೋಗ ಹರಡುವಿಕೆ ತಡೆಯುವ ಬಗ್ಗೆ ಪ್ರತಿ ದಿನ ಕೋವಿಡ್ ಪರೀಕ್ಷೆ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರನ್ನು ಮಾಹಿತಿ ಕೋರಲಾಗಿ, ಶ್ರೀ. ಸೀತಾರಾಮಯ್ಯ ರವರು ಮಾತನಾಡಿ ಕಳೆದ 15 ದಿನಗಳ ವಿವರಗಳನ್ನು ಸಭೆಗೆ ತಿಳಿಸಿದರು.

ಅಧ್ಯಕ್ಷರು ಮಾತನಾಡಿ ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಸರ್ಕಾರದ ಆದೇಶ ಇದ್ದು, ಮಾಸ್ಕ್ ಧರಿಸದಿರುವವರಿಗೆ ದಂಡ ವಿಧಿಸಿರುವ ಬಗ್ಗೆ ವಿವರವನ್ನು ಕೋರಲಾಗಿ ಹಾಜರಿದ್ದ ಮಾರ್ಷಲ್ ರವರು ಸದರಿ ಮಾಹಿತಿಗಳನ್ನು ಕ್ರೂಢೀಕರಿಸಿ ನೀಡಲಾಗುವುದೆಂದು ಸಭೆಗೆ ತಿಳಿಸಿದರು.

4. **ಕಂದಾಯ ವಿಭಾಗ:–**

ಕಂದಾಯ ವಿಭಾಗದ ಕಂದಾಯ ಪರಿವೀಕ್ಷಕರು ಹಾಗೂ ಕಂದಾಯ ವಸೂಲಿಗಾರರನ್ನು ಉದ್ದೇಶಿಸಿ ಅಧ್ಯಕ್ಷರು ಮಾತನಾಡಿ ಕಂದಾಯ ವಸೂಲಿಯಲ್ಲಿ ಪ್ರಗತಿ ಸಾಧಿಸುವಂತೆ ಹಾಗೂ ವಾರದಲ್ಲಿ ಒಂದು ದಿನ ಕಂದಾಯ ವಸೂಲಾತಿ ಜಾತಾ ಮಾಡಲು ಸೂಚಿಸಿದರು ಹಾಗೂ ಕಳೆದ ಎರಡು ವಾರಗಳಲ್ಲಿ ಆದ ಪ್ರಗತಿಯ ಬಗ್ಗೆ ವಿಚಾರಿಸಲಾಗಿ ಸಂಬಂಧಪಟ್ಟ ಕಂದಾಯ ಪರಿವೀಕ್ಷಕರು ಕಂದಾಯ ವಸೂಲಾತಿ ಪ್ರಗತಿಯ ಬಗ್ಗೆ ವಿವರಣೆ ನೀಡಿದರು.

5. **ಆರೋಗ್ಯ ವಿಭಾಗ:–**

ಶ್ರೀ. ತೇಜುಕುಮಾರ್ ರವರು ಮಾತನಾಡಿ ಸ್ವತ್ತಿನ ಸಂಖ್ಯೆ: 1033, 1ನೇ ಅಡ್ಡರಸ್ತೆ, ಓ.ಟಿ.ಸಿ ರಸ್ತೆಯಲ್ಲಿ ಮಾಲಿನ್ಯ ಹೆಚ್ಚುತ್ತಿದ್ದು, ಈ ಬಗ್ಗೆ ಕ್ರಮ ವಹಿಸುವಂತೆ ಸಂಬಂಧಪಟ್ಟ MOH ರವರಿಗೆ ಪತ್ರ ಬರೆದಿದ್ದರೂ ಕ್ರಮ ಕೈಗೊಂಡಿಲ್ಲವೆಂದು ದೂರಿದರು. ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ. ಸೀತಾರಾಮಯ್ಯ ರವರು ಮಾತನಾಡಿ ಸದರಿ ದೂರನ್ನು ದಿ:14.11.2020 ರಂದು ಪರಿಶೀಲಿಸಲಾಗಿದ್ದು, ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಓ.ಕೆ. ರಸ್ತೆ, ಎಸ್.ಪಿ. ರಸ್ತೆಗಳಲ್ಲಿ ಹೊಸದಾಗಿ ಮಹಿಳೆಯರ ಸಾರ್ವಜನಿಕ ಶೌಚಾಲಯ ನಿರ್ಮಿಸುವಂತೆ ಮನವಿ ಮಾಡಿರುತ್ತಾರೆ.

ಪ್ರೊಫೆಸರ್ ಜನಾರ್ಧನ್ ರವರು ಮಾತನಾಡಿ ಘೋರ್ಟ್ ಅಸೋಸಿಯೇಷನ್ ಬಗ್ಗೆ ಸಭೆಗೆ ತಿಳಿಸಿ ಬೆಂಗಳೂರು ಕೋಟೆಯ ಹೆಸರನ್ನು ಉಳಿಸಲು ಹಾಗೂ ಕಲಾಸಿಪಾಳ್ಯ ಬದಲಾಗಿ ಕೋಟೆ ಎಂಬ ಹೆಸರನ್ನು ಮರು ನಾಮಕರಣ ಮಾಡಲು ಕೋರಿದ ಮೇರೆಗೆ ಅಧ್ಯಕ್ಷರು ಮಾತನಾಡಿ ಈ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯಂತೆ ಕ್ರಮ ಕೈಗೊಳ್ಳಬೇಕಾಗಿದ್ದು, ಸಂಬಂಧಪಟ್ಟ ಇಲಾಖೆಗೆ ತಿಳಿಸಲಾಗುವುದೆಂದು ಹೇಳಿದರು.

ಮು.ತಿ.ನೋ..

ಕೋಟೆ ಸುತ್ತಮುತ್ತ ಪ್ರದೇಶಗಳಲ್ಲಿ ಅನಧಿಕೃತವಾಗಿ ಹಸುಗಳನ್ನು ಪಾಲನೆ ಮಾಡುತ್ತಿದ್ದು, ಈ ಹಸುಗಳಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದ್ದ, ಈ ಕೆಲವು ದಿನಗಳ ಹಿಂದೆ ಹಸುವಿನಿಂದ ಹತ್ಯೆಗೊಳಗಾದ ಬಗ್ಗೆ ನೆನೆಯುತ್ತಾ ಸಂಬಂಧಪಟ್ಟವರು ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಹಾಗೂ ಕೋಟೆ "ಬಿ" ರಸ್ತೆಯಲ್ಲಿ ಖಾಸಗಿ ಬಸ್ಸುಗಳನ್ನು ನಿಲ್ಲಿಸಿ ಸುತ್ತಮುತ್ತಲಿನ ಪ್ರದೇಶದ ನಿವಾಸಿಗಳಿಗೆ ಅನಾನುಕೂಲ ಆಗುತ್ತಿರುವ ಬಗ್ಗೆ ತಿಳಿಸಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟ ಸಂಚಾರಿ ಪೊಲೀಸ್ ಠಾಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದೆಂದು ಹಾಗೂ ಅನಧಿಕೃತ ಹಸುಗಳ ಹಾವಳಿಯನ್ನು ಸಂಬಂಧಪಟ್ಟ ಪಶು ಸಂಗೋಪನಾ ಇಲಾಖೆಗೆ ಕ್ರಮ ಕೈಗೊಳ್ಳುವಂತೆ ಸೂಚಿಸುವುದಾಗಿ ಹೇಳಿದರು.

## 6. ಬೃಹತ್ ಮಳೆನೀರು ಗಾಲುವೆ ವಿಭಾಗ:-

ಬೃಹತ್ ಮಳೆನೀರು ಗಾಲುವೆ ವಿಭಾಗಕ್ಕೆ ಸಂಬಂಧಪಟ್ಟಂತೆ ವಾರ್ಡ್-119ರಲ್ಲಿ ಬಂಬು ಬಜಾರ್ ರಸ್ತೆಯಿಂದ ಜೆ.ಸಿ. ರಸ್ತೆಯವರೆಗೆ ನವ ನಗರೋತ್ಥಾನ ಅನುದಾನದ ಅಡಿ ಹೂಳೆತ್ತುವ ಕಾರ್ಯ ನಡೆಯುತ್ತಿರುವ ಬಗ್ಗೆ ಶ್ರೀಮತಿ. ಶಿಲ್ಪ ರವರು ಸಭೆಗೆ ತಿಳಿಸಿದರು. ಅಧ್ಯಕ್ಷರು ಮಾತನಾಡಿ ಮಳೆನೀರು ಗಾಲುವೆ ಮೇಲೆ ನಿರ್ಮಾಣಗೊಂಡಿರುವ ಕಟ್ಟಡದ ಬಗ್ಗೆ ವಿಚಾರಿಸಲಾಗಿ ಸದರಿ ಕಟ್ಟಡಗಳನ್ನು ತೆರವುಗೊಳಿಸಲು ಬಗ್ಗೆ ಕಡತ ಪ್ರಗತಿಯಲ್ಲಿರುತ್ತದೆ ಎಂದು ಶ್ರೀಮತಿ. ಶಿಲ್ಪ ರವರು ತಿಳಿಸಿದರು.

## 7. ಬೆಸ್ಕಾಂ ವಿಭಾಗ:-

ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ ಶ್ರೀ. ರಾಜೇಶ್ ಸಹಾಯಕ ಅಭಿಯಂತರರು ಮಾತನಾಡಿ ವಾರ್ಡ್ ಪರಿಮಿತಿಯೊಳಗೆ ತುರ್ತು ಕಾಮಗಾರಿಗಳಿಗಾಗಿ ಯೂನಿಟ್ ಕಛೇರಿ ನಿರ್ಮಿಸಲು ಜಾಗ ಒದಗಿಸಬೇಕಾಗಿ ಕೋರಿರುತ್ತಾರೆ. ಈ ಬಗ್ಗೆ ಪ್ರದೀಪ್‌ಕುಮಾರ್ ವಾರ್ಡ್ ಅಭಿಯಂತರರು ಮಾತನಾಡಿ ಸ್ಥಳೀಯ ಶಾಸಕರು ಈ ಬಗ್ಗೆ ಮಾನ್ಯ ಆಯುಕ್ತರಿಗೆ ಪತ್ರ ಬರೆದಿದ್ದು, ಕಡತ ಪ್ರಗತಿಯಲ್ಲಿರುವ ಬಗ್ಗೆ ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಹಾಜರಿದ್ದ ಸ್ಥಳೀಯರಿಗೆ ನಮ್ಮ ಪಾಲಿಕೆ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸ್ಥಳೀಯರಿಗೆ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

[signature] 21/11/20

(ಪ್ರದೀಪ್‌ಕುಮಾರ್ ಎನ್)

ಕಾರ್ಯದರ್ಶಿ

ವಾರ್ಡ್-119 ಧರ್ಮರಾಯಸ್ವಾಮಿ ದೇವಸ್ಥಾನ

D.K. madhusudhan 21/11/20

(ಡಿ.ಕೆ. ಮಧುಸೂದನ್)

ನೋಡಲ್ ಅಧಿಕಾರಿ

ವಾರ್ಡ್-119 ಧರ್ಮರಾಯಸ್ವಾಮಿ ದೇವಸ್ಥಾನ